# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.17-2012** **ಪಿ . ಡಬ್ಲುಃ 2**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಹೆಚ್. ರವಿ<br>ಬಂಚಳ್ಳಿಹುಂಡಿ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 01-03-2025. |

**ಪಾಟೀ ಸವಾಲುಃ ಮಾನ್ಯ ಎ.ಜಿ.ಪಿ ರವರಿಂದಃ**

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಾನು ಎಸ್.ಎಸ್.ಎಲ್.ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆಯವರು ಪ್ರತಿವಾದಿಗಳ ವಿರುದ್ಧ ಯಾವ ವಿಚಾರಕ್ಕಾಗಿ ದಾವೆ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿರುತ್ತದೆ. ನನ್ನ ತಂದೆಯವರು ದಾವಾ ಷೆಡ್ಯೂಲ್ ಸ್ವತ್ತನ್ನು ನನಗೆ ಮಾಡಿಕೊಡಬೇಕು ಎಂದು ಈ ದಾವೆ ಸಲ್ಲಿಸಿರುತ್ತಾರೆ. ಸಾಮಾನ್ಯವಾಗಿ ಕಾಲುವೆ, ಗೋಮಾಳ, ಸ್ಮಶಾನ, ಪೋಡಿ ಖರಾಬು ಸ್ವತ್ತುಗಳು ಸರ್ಕಾರದ ಒಡೆತನಕ್ಕೆ ಸೇರಿದ ಸ್ವತ್ತುಗಳಾಗಿರುತ್ತವೆ ಎಂದರೆ ಸರಿ. ಸದರಿ ಸ್ವತ್ತುಗಳಿಗೆ ಸರ್ಕಾರವನ್ನು ಹೊರತುಪಡಿಸಿ ಬೇರೆ ಯಾರಿಗೂ ಯಾವುದೇ ಹಕ್ಕಾಗಲಿ, ಒಡೆತನವಾಗಲಿ ಮತ್ತು ಹಿತಾಸಕ್ತಿ ಆಗಲಿ ಇರುವುದಿಲ್ಲ ಎಂದರೆ ಸರಿ. ಸದರಿ ಸ್ವತ್ತುಗಳಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ

ಸಾರ್ವಜನಿಕರ ಹಿತಾಸಕ್ತಿಯಿಂದ ಆ ಸ್ಥಳಗಳಲ್ಲಿ ಸರ್ಕಾರಕ್ಕೆ ಸಂಬಂಧಪಟ್ಟ ಕಟ್ಟಡಗಳನ್ನು ನಿರ್ಮಿಸುವ ಅವಕಾಶ ಕಾನೂನಿನಲ್ಲಿ ಇರುತ್ತದೆ ಎಂದರೆ ಸರಿ.

2. ಈ ದಾವಾವನ್ನು ಸರ್ವೇ ನಂ.599 ರ ಬಾಬ್ತು ಸಲ್ಲಿಸಲಾಗಿರುತ್ತದೆ. ಸದರಿ ಸ್ವತ್ತು 1 ಎಕರೆ 7 ಗುಂಟೆ ಇರುತ್ತದೆ. ಸದರಿ ಸ್ವತ್ತು ಸರ್ಕಾರಿ ಓಣಿ ಖರಾಬು ಎಂದರೆ ಸರಿ. ಸಾಕ್ಷಿ ಮುಂದುವರೆದು ಜಮೀನಿನ ಪಕ್ಕದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತು ನಮ್ಮ ಗ್ರಾಮದ ಗ್ರಾಮಸ್ಥರು ಎಲ್ಲರೂ ಉಪಯೋಗಿಸುವಂತಹ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ನನಗಾಗಲಿ, ನನ್ನ ಕುಟುಂಬಕ್ಕಾಗಿ ಒಡೆತನದ ಹಕ್ಕ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುರೆದು ಗ್ರ್ಯಾಂಟ್ ಕಾಪಿ ಇದ್ದು ಸುಮಾರು 60 ವರ್ಷಗಳಿಂದ ನಾವು ಅನುಭವಿಸುತ್ತಿರುತ್ತೇವೆ ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತು ಸರ್ಕಾರಿ ಸ್ವತ್ತಾಗಿರುವುದರಿಂದ ಖಾಸಗಿ ವ್ಯಕ್ತಿಗಳಿಗೆ ಅದನ್ನು ಉಪಯೋಗಿಸುವ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

3. ನನ್ನ ತಾತನವರು ಸಿರಿಗ ಮಾಲೇಗೌಡ. ನನ್ನ ತಾತನವರಿಗೆ ಇಬ್ಬರು ಮಕ್ಕಳು ಇದ್ದು ಅವರುಗಳೆಂದರೆ ಮಾಲಮ್ಮ ಮತ್ತು ಹುಚ್ಚಯ್ಯನಾದ ನನ್ನ ತಂದೆ ಆಗಿರುತ್ತಾರೆ. ನನ್ನ ತಾತನವರು ಮರಣ ಹೊಂದಿ ಸುಮಾರು 40 ವರ್ಷಗಳಾಗಿರಬಹುದು. ನನ್ನ ತಾತನವರು ನಾನು ಹುಟ್ಟಿದ ನಂತರ ಮರಣ ಹೊಂದಿರುತ್ತಾರೆ. ನನ್ನ ತಾತನವರಿಗೆ

ದಾವಾ ಷೆಡ್ಯೂಲ್ ಸ್ವತ್ತನ್ನು ಹೊರತುಪಡಿಸಿ ಬೇರೆ ಯಾವುದೇ ಸ್ವತ್ತು ಇರುವುದಿಲ್ಲ. ನನ್ನ ತಂದೆಯವರಿಗೂ ಸಹ ದಾವಾ ಷೆಡ್ಯೂಲ್ ಸ್ವತ್ತನ್ನು ಹೊರತುಪಡಿಸಿ ಬೇರೆ ಯಾವುದೇ ಸ್ವತ್ತು ಇರುವುದಿಲ್ಲ. ದಾವಾ ಷೆಡ್ಯೂಲ್ ಸ್ವತ್ತು ದಿ.11-08-1967 ರಲ್ಲಿ ನನ್ನ ತಾತನವರಿಗೆ ಮಂಜೂರು ಆಯಿತು ಎಂದು ತೋರಿಸಲು ನಮ್ಮ ಬಳಿ ಗ್ರ್ಯಾಂಟ್ ಸರ್ಟಿಫಿಕೆಟ್ ಮತ್ತು ನನ್ನ ತಾತನವರು ಕಿಮ್ಮತ್ತು ಕಟ್ಟಿರುವ ರಶೀದಿ ಇರುತ್ತದೆ. ನಿಪಿ-6 ಮಂಜೂರಾತಿ ಪತ್ರದ ಪ್ರಕಾರ ದಾವಾ ಷೆಡ್ಯೂಲ್ ಸ್ವತ್ತು ನನ್ನ ತಾತನವರಾದ ಸಿರಿಗ ಮಾಲೇಗೌಡ ರವರಿಗೆ ಮಂಜೂರು ಆಗಿರುತ್ತದೆ. ನಿಪಿ-6 ರಲ್ಲಿ ಮಾಲೇಗೌಡ ಎಂದು ನಮೂದು ಆಗಿರುತ್ತದೆ ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**